# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1061 (1169)

2 ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3 ಉತ್ತರಿಸುವ ದಿನಾಂಕ : 13-03-2026

4 ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 2874 ಘೋಷಣೆ ಆದ ಸರ್ಕಾರ ಯೋಜನೆಗಳಿಗೆ ವಾರ್ಷಿಕವಾಗಿ ನೀಡಲಾಗುತ್ತಿರುವ ಅನುದಾನವೆಷ್ಟು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜನಪ್ರತಿನಿಧಿಗಳ ವಾರ್ಷಿಕ ಅನುದಾನ ಸಹಿತ ವಿವಿಧ ಅನುದಾನಗಳ ಪೈಕಿ ವೆಚ್ಚವಾದ ಮತ್ತು ಸರ್ಕಾರಕ್ಕೆ ಹಿಂತಿರುಗಿಸಿದ ಅನುದಾನವೆಷ್ಟು, ಅದಕ್ಕೆ ಕಾರಣವೇನು; (ಯೋಜನಾವಾರು ವಿವರ ಒದಗಿಸುವುದು) | ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ವಾರ್ಷಿಕವಾಗಿ ವಿವಿಧ ಇಲಾಖೆಗಳಿಗೆ ವಿವಿಧ ಲೆಕ್ಕಶೀರ್ಷಿಕೆ/ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಲಾಗುತ್ತಿರುವ ಅನುದಾನದ ವಿವರ ಕೆಳಕಂಡಂತಿದೆ.<br>(ರೂ. ಕೋಟಿಗಳಲ್ಲಿ)<br>ಕ್ರ.ಸಂ / ವರ್ಷ / ಅನುದಾನ<br>1 / 2022-23 / 2,65,719.92<br>2 / 2023-24 / 3,27,746.62<br>3 / 2024-25 / 3,71,382.80<br>ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವ್ಯಾಪ್ತಿಗೊಳಪಡುವ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ-1.3 ರನ್ವಯ 2013-14ನೇ ಸಾಲಿನಿಂದ ರೂ. 2.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಅದರಂತೆ, 224 ವಿಧಾನ ಸಭಾ ಕ್ಷೇತ್ರಗಳಿಗೆ ಕಳೆದ ಮೂರು ವರ್ಷಗಳಲ್ಲಿ ರೂ. 1344.00 ಕೋಟಿಗಳನ್ನು ನೀಡಲಾಗಿದೆ.<br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಬಿಡುಗಡೆಯಾದ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿದೆ:<br>(ರೂ. ಕೋಟಿಗಳಲ್ಲಿ)<br>ಕ್ರ.ಸಂ / ವರ್ಷ / ಬಿಡುಗಡೆ / ವೆಚ್ಚ*<br>1 / 2022-23 / 448.00 / 724.83<br>2 / 2023-24 / 448.00 / 290.42<br>3 / 2024-25 / 448.00 / 479.65<br>(ದಿ:5-3-2026ರ worksoft ತಂತ್ರಾಂಶದ ಮಾಹಿತಿ ಆಧಾರಿತ)<br>* ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಒಳಗೊಂಡಿರುತ್ತದೆ |
| (ಆ) | ರಾಜ್ಯ ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಶೂನ್ಯ ಅಥವಾ ಅತಿ ಕಡಿಮೆ ಅನುದಾನ ಹಂಚಿಕೆ ಮಾಡುತ್ತಿರುವ ಸುಮಾರು ಒಂದು ಸಾವಿರ ಯೋಜನೆಗಳನ್ನು ರದ್ದುಪಡಿಸುವುದು ಸೇರಿದಂತೆ ಕಾರ್ಯಸಾಧ್ಯವಲ್ಲದ ಯೋಜನೆಗಳ ಅನುದಾನವನ್ನು ಪರಿಣಾಮಕಾರಿ | ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಡಿಸೆಂಬರ್-2025ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ ತನ್ನ 10ನೇ ವರದಿಯಲ್ಲಿ 25 ಪ್ರಮುಖ ಶಿಫಾರಸ್ಸುಗಳನ್ನು ಮಂಡಿಸಿದ್ದು ಇದರಲ್ಲಿ, ಸುಮಾರು 1000 ನಿಷ್ಕ್ರಿಯ ಲೆಕ್ಕ ಶೀರ್ಷಿಕೆಗಳ (HOA)ಗಳನ್ನು ಅಂತ್ಯಗೊಳಿಸಲು, ವಿಲೀನಗೊಳಿಸಲು ಅಥವಾ ಮರು ವರ್ಗೀಕರಿಸಲು ಆರ್ಥಿಕ ಇಲಾಖೆಗೆ ಅಕೌಂಟೆಂಟ್ ಜನರಲ್ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಯೋಜನೆಗಳಿಗೆ ಮರುಹಂಚಿಕೆ ಮಾಡುವಂತೆ ನೀಡಿದ ಶಿಫಾರಸ್ಸಿನ ಆಧಾರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು: | ಕಛೇರಿಯೊಂದಿಗೆ ಸಮಾಲೋಚಿಸಿ ಸಮಗ್ರವಾಗಿ ಪರಿಶೀಲಿಸಿ ವೈಜ್ಞಾನಿಕಗೊಳಿಸಲು (Rationalise) ಶಿಫಾರಸ್ಸು ಮಾಡಿರುತ್ತಾರೆ. ಇದಕ್ಕೆ 6 ತಿಂಗಳ ಕಾಲಾವಕಾಶದಲ್ಲಿ ಪೂರ್ಣಗೊಳಿಸಲು ತಿಳಿಸಿರುತ್ತಾರೆ.<br><br>ಮುಂದುವರೆದು, ದಿನಾಂಕ:31-01-2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸರ್ಕಾರದ ಕಾರ್ಯದರ್ಶಿಗಳ ಸಭೆಯಲ್ಲಿ ಆಯೋಗ-2 ರ ಶಿಫಾರಸ್ಸುಗಳನ್ನು ಆಯಾ ಇಲಾಖಾ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲು ಸೂಚಿಸಿರುತ್ತಾರೆ. |
| (ಇ) | ಶೂನ್ಯ ಅನುದಾನ ಅಥವಾ ಅತಿ ಕಡಿಮೆ ಅನುದಾನ ಹೊಂದಿರುವ ಮತ್ತು ಕಾರ್ಯಸಾಧ್ಯವಲ್ಲವೆಂದು ಗುರುತಿಸಲಾದ ಯೋಜನೆಗಳ ಒಟ್ಟು ಸಂಖ್ಯೆ ಎಷ್ಟು: ಅವುಗಳಲ್ಲಿ ಎಷ್ಟು ಯೋಜನೆಗಳನ್ನು ರದ್ದುಪಡಿಸಲಾಗಿದೆ ಅಥವಾ ವಿಲೀನಗೊಳಿಸಲು ತೀರ್ಮಾನಿಸಲಾಗಿದೆ: | ಅಲ್ಪ ಅನುದಾನ ಹಂಚಿಕೆಯಾಗಿರುವ 208-280 ಯೋಜನೆಗಳನ್ನು ಆಯೋಗವು ಗುರುತಿಸಿರುತ್ತದೆ. ಹಣಕಾಸು ಇಲಾಖೆಯು ಯೋಜನಾ ಇಲಾಖೆ ಮತ್ತು ಸಂಬಂಧಪಟ್ಟ ಆಡಳಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಗುರುತಿಸಲಾದ 280 ಲೆಕ್ಕ ಶೀರ್ಷಿಕೆಗಳು/ಯೋಜನೆಗಳ ಬಗ್ಗೆ 6 ತಿಂಗಳ ಕಾಲಮಿತಿಯೊಳಗೆ ಜಂಟಿ ಮರುಪರಿಶೀಲನೆ ನಡೆಸಲು ಶಿಫಾರಸು ಮಾಡಿದ್ದು, ದಿನಾಂಕ:31-01-2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸರ್ಕಾರದ ಕಾರ್ಯದರ್ಶಿಗಳ ಸಭೆಯಲ್ಲಿ ಆಯೋಗ-2 ರ ಶಿಫಾರಸ್ಸುಗಳನ್ನು ಆಯಾ ಇಲಾಖಾ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲು ಸೂಚಿಸಿರುತ್ತಾರೆ. |
| ಈ) | ಇಂತಹ ಯೋಜನೆಗಳನ್ನು ರದ್ದುಪಡಿಸುವ ಮೂಲಕ ಉಳಿಯುವ ಅನುದಾನವನ್ನು ಯಾವ ಕ್ಷೇತ್ರಗಳಿಗೆ ಅಥವಾ ಯೋಜನೆಗಳಿಗೆ ಮರುಹಂಚಿಕೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ; ಬಳಕೆಯಾಗದ ಚಿಕ್ಕ ಶೀರ್ಷಿಕೆಗಳಲ್ಲಿ ಮೊತ್ತ ಜಮಾವಣೆಯನ್ನು ತಡೆಯಲು ಹಾಗೂ ಸರಳೀಕೃತ ಮತ್ತು ಪ್ರಮಾಣೀಕೃತ ಕಾರ್ಯವಿಧಾನ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ದಿನಾಂಕ:31-01-2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸರ್ಕಾರದ ಕಾರ್ಯದರ್ಶಿಗಳ ಸಭೆಯಲ್ಲಿ ಆಯೋಗ-2 ರ ಶಿಫಾರಸ್ಸುಗಳನ್ನು ಆಯಾ ಇಲಾಖಾ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲು ಸೂಚಿಸಿರುತ್ತಾರೆ. |
| ಉ) | ಆಯೋಗದ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಇಲಾಖಾವಾರು ಮೇಲ್ವಿಚಾರಣೆ / ಪರಿಶೀಲನೆ ವ್ಯವಸ್ಥೆ ಮಾಡಲಾಗಿದೆಯೇ; ಆಯೋಗದ ಅವಧಿ ಮುಗಿದನಂತರ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಪ್ರತ್ಯೇಕ ಘಟಕವನ್ನು ಸ್ಥಾಪಿಸುವ ಕುರಿತು ಸರ್ಕಾರದ ಕ್ರಮಗಳೇನು? | ಆಯೋಗದ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಇಲಾಖಾವಾರು ಮೇಲ್ವಿಚಾರಣೆ / ಪರಿಶೀಲನೆ ಮಾಡಲು ಪ್ರತ್ಯೇಕ ಘಟಕ "ಸುಧಾರಣಾ ನಿರ್ವಹಣಾ ಘಟಕವನ್ನು(RMU)" ಅಗತ್ಯ ಸಿಬ್ಬಂದಿಯೊಂದಿಗೆ ಸ್ಥಾಪನೆ ಮಾಡಲು ಆಯೋಗವು ಶಿಫಾರಸ್ಸು ಮಾಡಿದ್ದು, ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಪಿಡಿಎಸ್/ 03/ಐಪಿಆರ್/2026**

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು